ಈ ಪುಸ್ತಕವನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು.

**SUBJECT CODE : 37**

# ಕನ್ನಡ ಭಾಷಾ ಪರೀಕ್ಷೆ

# KANNADA LANGUAGE TEST

| ಸಂವೀಕ್ಷಕರ ಸಹಿ<br>**Invigilator's Signature** | ಪ್ರಶ್ನೆ ಸಹಿತ ಉತ್ತರಪತ್ರಿಕೆಯ ಸಂಖ್ಯೆ<br>**Question Cum Answer Booklet No.** | ಬಾರ್‌ಕೋಡ್‌ಗಳನ್ನು ಯಾವುದೇ ರೀತಿಯಲ್ಲಿ ಹಾಳು ಮಾಡಬಾರದು<br>**Do not tamper or damage the bar codes** |
|---|---|---|
| | | |

Reg. No./ **ನೋಂದಣಿ ಸಂಖ್ಯೆ :**

**ಗರಿಷ್ಠ ಸಮಯ / Max. Time : 3 ಗಂಟೆಗಳು** **ಗರಿಷ್ಠ ಅಂಕಗಳು / Max. Marks : 150**

## ಅಭ್ಯರ್ಥಿಗಳಿಗೆ ಸೂಚನೆಗಳು / Instructions to Candidates

1. ಈ ಪುಟದ ಮೇಲ್ಭಾಗದಲ್ಲಿ ಒದಗಿಸಿದ ಸ್ಥಳದಲ್ಲಿ ರಿಜಿಸ್ಟರ್ ನಂಬರನ್ನು ಬರೆಯಿರಿ.
2. ಪ್ರಶ್ನೆ ಸಹಿತ ಉತ್ತರ ಪುಸ್ತಿಕೆಯ ಯಾವುದೇ ಇತರ ಪುಟದಲ್ಲಿ ನಿಮ್ಮ ಹೆಸರು ಅಥವಾ ರಿಜಿಸ್ಟರ್ ನಂಬರನ್ನು ಬರೆಯಬೇಡಿ.
3. ಕಪ್ಪು ಅಥವಾ ನೀಲಿ ಪೆನ್ನನ್ನು ಉಪಯೋಗಿಸಿ ನಿಮ್ಮ ಉತ್ತರವನ್ನು ಬರೆಯಿರಿ.
4. ಎಲ್ಲಾ ಪ್ರಶ್ನೆಗಳಿಗೆ ಪ್ರಶ್ನೆಸಹಿತ ಉತ್ತರ ಪುಸ್ತಿಕೆಯಲ್ಲಿ ಒದಗಿಸಿದ ಸ್ಥಳದಲ್ಲೇ ಉತ್ತರ ಬರೆಯಿರಿ. ಉತ್ತರಕ್ಕಾಗಿ ಹೆಚ್ಚುವರಿ ಹಾಳೆಯನ್ನು ಒದಗಿಸಲಾಗುವುದಿಲ್ಲ.
5. ಪರೀಕ್ಷಾ ಕೊಠಡಿಯನ್ನು ಬಿಡುವ ಮೊದಲು ನಿಮ್ಮ ಪ್ರಶ್ನೆ ಸಹಿತ ಉತ್ತರ ಪುಸ್ತಿಕೆಯನ್ನು ಸ್ವತಃ ನೀವೇ ಸಂವೀಕ್ಷಕರಿಗೆ ಒಪ್ಪಿಸತಕ್ಕದ್ದು.
6. ಅಭ್ಯರ್ಥಿಯು ಎಲ್ಲಾ ಪ್ರಶ್ನೆಗಳಿಗೆ ಕನ್ನಡ ಭಾಷೆಯಲ್ಲಿ ಉತ್ತರಿಸತಕ್ಕದ್ದು.
7. ಮೇಲ್ಕಂಡ ಯಾವುದೇ ಸೂಚನೆಗಳನ್ನು ಉಲ್ಲಂಘಿಸಿದಲ್ಲಿ, ಅಂತಹ ಉತ್ತರ ಪತ್ರಿಕೆಯನ್ನು ರದ್ದುಗೊಳಿಸಲಾಗುವುದು.

1. Write your Reg. No. in the space provided above.
2. Do not write your Name or Reg. No. on any other page of the Question Cum Answer Booklet.
3. Write your answer using Blue or Black pen.
4. **Write answers for all questions in the space provided. No additional sheet will be provided.**
5. Handover your Question Paper Cum Answer Booklet personally to the invigilator, before you leave the examination hall.
6. Candidate must write the entire paper in Kannada language only.
7. Failure to adhere to any of the above mentioned instructions will render the paper liable for rejection.

**Do not tamper or damage the bar codes**

ಯಾವುದೇ ರೀತಿಯ ಮೊಬೈಲ್ ಫೋನ್‌ಗಳು, ಕ್ಯಾಲ್ಕ್ಯುಲೇಟರ್‌ಗಳನ್ನು ಅಥವಾ ಇತರೆ ಎಲೆಕ್ಟ್ರಾನಿಕ್ ಉಪಕರಣಗಳನ್ನು ಪರೀಕ್ಷಾ ಆವರಣಗಳಲ್ಲಿ ತರುವುದನ್ನು ನಿಷೇಧಿಸಲಾಗಿದೆ.

**Use of mobile phones, Calculators or any other electronic gadgets is prohibited inside the examination venue/center.**

# DO NOT WRITE ANYTHING ON THIS PAGE

## ಈ ಪುಟದ ಮೇಲೆ ಏನನ್ನೂ ಬರೆಯಕೂಡದು

ಅಂಕಗಳ ಪಟ್ಟಿ / Marks Statement (For Examiners Only)

ಅಭ್ಯರ್ಥಿಯು ಈ ಕೆಳಗೆ ಯಾವುದೇ ಗುರುತು ಮಾಡಬಾರದು / Candidate should not make any marking on this sheet below.

| ಪ್ರಶ್ನೆಸಂಖ್ಯೆ Q. No. | ಅಂಕಗಳು Marks Awarded | ಪ್ರಶ್ನೆಸಂಖ್ಯೆ Q. No. | ಅಂಕಗಳು Marks Awarded | ಪ್ರಶ್ನೆಸಂಖ್ಯೆ Q. No. | ಅಂಕಗಳು Marks Awarded | ಒಟ್ಟು ಅಂಕಗಳು Total Marks |
|---|---|---|---|---|---|---|
| 1 | | 14 | | 27 | | |
| 2 | | 15 | | 28 | | |
| 3 | | 16 | | 29 | | |
| 4 | | 17 | | 30 | | |
| 5 | | 18 | | 31 | | |
| 6 | | 19 | | 32 | | |
| 7 | | 20 | | 33 | | |
| 8 | | 21 | | 34 | | |
| 9 | | 22 | | 35 | | |
| 10 | | 23 | | 36 | | |
| 11 | | 24 | | 37 | | |
| 12 | | 25 | | | | |
| 13 | | 26 | | | | |
| **Total Marks in words :** | | | | | **Grand Total :** | |

ಮೌಲ್ಯಮಾಪಕರ ಸಹಿ, ಸಂಕೇತ ಮತ್ತು ದಿನಾಂಕ
Evaluator's Signature, Code with date

1. ಈ ಕೆಳಗಿನ ಯಾವುದಾದರೂ, ಒಂದು ವಿಷಯವನ್ನು ಕುರಿತು 300 ಶಬ್ದಗಳಲ್ಲಿ ಪ್ರಬಂಧ ಬರೆಯಿರಿ. **25**

(ಅ) ವಿಜ್ಞಾನದ ಉಪಯೋಗ, ದುರುಪಯೋಗ.

(ಆ) ಧೈರ್ಯವೇ ದೊಡ್ಡ ಸಾಧನ.

(ಇ) ನೀವು ಮೆಚ್ಚುವ ಸಾಹಿತಿ.

(ಈ) ವಿಶ್ವದ ಶಾಂತಿ ಸಾಧನೆ.

**37**

**37** (4)

ಕೆಳಗಿನ ಗದ್ಯಭಾಗವನ್ನು ಓದಿ ಕೊನೆಯಲ್ಲಿರುವ ಪ್ರಶ್ನೆಗಳಿಗೆ ನಿಮ್ಮ ಮಾತುಗಳಲ್ಲಿ ಉತ್ತರಿಸಿ. **25**

ನಾರದರು, ಎಲೈ ಅರ್ಜುನನೇ ಚಂದ್ರಹಾಸನ ವೃತ್ತಾಂತವನ್ನು ಕೇಳಲು ಇದು ಸಮಯವಲ್ಲದ ಸಮಯವು. ಪರಮ ಪವಿತ್ರವಾದ ಯಜ್ಞಾಶ್ವವು ಅನ್ಯರಾಜರ ವಶವಾಗಿರುವುದು. ಹಸ್ತಿನಾವತಿಯಲ್ಲಿ ಯಜ್ಞದೀಕ್ಷಿತನಾಗಿ ಕುಳಿತಿರುವ ಧರ್ಮರಾಜನು ಯಜ್ಞದ ಆಗುಹೋಗುಗಳ ಬಗ್ಗೆ ಸದಾ ಚಿಂತಿಸುತ್ತಿರುವನು. ಹೀಗಿರುತ್ತ ನೀನು ಸಮಯವನ್ನು ವ್ಯರ್ಥವಾಗಿ ಕಳೆಯದೆ ಕೈಗೊಂಡ ಕಾರ್ಯವನ್ನು ನೆರವೇರಿಸಿ ಕೃತಕೃತ್ಯನಾಗುವುದು ವಿಹಿತವಲ್ಲವೆ ? ಎಂದರು. ಆ ಮಾತಿಗೆ ಪ್ರತಿಯಾಗಿ ಅಪ್ರತಿಮ ವೀರನಾದ ಧನಂಜಯನು ನಾರದ ಮುನೀಂದ್ರನಿಗೆ ಕೈಮುಗಿದು ಈ ತೆರನಾಗಿ ನುಡಿದನು. ತಪೋಧನರೇ ನನಗೆ ಚಂದ್ರಹಾಸನ ಕಥೆಯನ್ನು ವಿಷದವಾಗಿ ಹೇಳಿರಿ. ಆ ವೈಷ್ಣವ ಶಿರೋಮಣಿಯ ಪಾವನವಾದ ಚರಿತ್ರೆಯನ್ನು, ಸಕಲ ಜನರಿಗೂ ಮಂಗಳಕರವಾದ ಜೀವನ ಚರಿತ್ರೆಯನ್ನು ಕೇಳಬೇಕೆಂದು ಉತ್ಕಂಠಿತನಾಗಿದ್ದೇನೆ, ಏಕೆಂದರೆ ಮಾನವನ ಬದುಕು ಕ್ಷಣಿಕವಾದುದು. ಆಯಸ್ಸು, ಶಾಶ್ವತವಲ್ಲ, ನೀರಮೇಲಣ ಗುಳ್ಳೆಯಂತೆ ನರನು ತೋರಿ ಅಡಗುವನು. ಬರಿಯ ಭ್ರಮೆಯಿಂದ ಭ್ರಾಂತನಾಗಿ ವಿಷ್ಣು ಭಕ್ತನ ದಿವ್ಯಕತೆಯನ್ನು ಕೇಳದೆ ಇರಬಾರದು. ಅಂದು ಗೀತಾಚಾರ್ಯನು ಉಭಯ ಸೇನೆಗಳು ಯುದ್ಧ ಸನ್ನದ್ಧವಾಗಿ ನಿಂತಿದ್ದಾಗ ಅವರ ಮಧ್ಯೆ ಭಗವದ್ಗೀತೆಯನ್ನು ಬೋಧಿಸಲಿಲ್ಲವೆ ? ಕ್ಷಣ ಮಾತ್ರದಲ್ಲಿ ನಾಶಹೊಂದುವ ಈ ಮಾನವ ದೇಹವನ್ನು ನೆರೆನಂಬಿ ನಾನು ವಿಷ್ಣು ಭಕ್ತನ ದಿವ್ಯ ಜೀವನ ಚರಿತ್ರೆಯನ್ನು ಕೇಳದಿರಲೆ ? ಅಗತ್ಯವಾಗಿ ಹೇಳಿ ಎಂದು ಪಾರ್ಥನು ಒತ್ತಾಯಿಸಿದನು.

ನಾರದರು ಹಾಗಾದರೆ ಹೇಳುವೆನು ಕೇಳು, ಹಿಂದೆ ಕೇರಳ ದೇಶವನ್ನು ಪರಮ ಧಾರ್ಮಿಕನಾದ ಮೇಧಾವಿಯೆಂಬ ಅರಸನು ಆಳುತ್ತಿದ್ದನು. ಆತನು ಸದ್ಗುಣಗಳ ತವರು ಮನೆಯಂತೆ ಗುಣೋದಯನು ಅತ್ಯಂತ ಶಕ್ತಿಶಾಲಿಯಾದ ರಾಜನು. ಆ ರಾಜನಿಗೆ ತನ್ನ ಪಟ್ಟದ ರಾಣಿಯಲ್ಲಿ ಒಬ್ಬ ಸುಕುಮಾರನು ಮೂಲ ನಕ್ಷತ್ರದ ಕೃತೀಯ ಪಾದದಲ್ಲಿ ಕೆಟ್ಟ ಲಗ್ನದಲ್ಲಿ ಜನಿಸಿದನು, ಆ ಹುಟ್ಟಿದ ಮಗುವಿಗೆ ಎಡದ ಕಾಲಲ್ಲಿ ಆರು ಬೆರಳುಗಳಿದ್ದವು. ರಾಜನು ತನ್ನ ಪುತ್ರನಿಗೆ ಜಾತಕರ್ಮ ನಾಮಕರಣಗಳೇ ಮೊದಲಾದ ಕ್ರಿಯೆಗಳನ್ನು ಮಾಡಿಸಿದನು. ರಾಜಧಾನಿಯಲ್ಲಿ ಹಬ್ಬದ ವಾತಾವರಣ ಎದ್ದು ಕಾಣುತ್ತಿತ್ತು. ಹೀಗೆ ಪುತ್ರೋತ್ಸವದಲ್ಲಿ ನಿರತನಾಗಿದ್ದ ಮಹಾರಾಜನಿಗೆ ಕೆಟ್ಟ ಕಾಲ ಸನ್ನಿಹಿತವಾಯಿತು. ಬಲಾಢ್ಯರಾದ ಶತ್ರುರಾಜರು ಅನೇಕ ಮಂದಿ ರಾಜಧಾನಿಯನ್ನು ದಿಢೀರನೆ ಮುತ್ತಿದರು. ಮೇಧಾವಿಯು ಕ್ಷಾತ್ರಧರ್ಮಕ್ಕೆ ಅನುಗುಣವಾಗಿ ಯುದ್ಧರಂಗವನ್ನು ಪ್ರವೇಶಿಸಿದ. ಅಲ್ಲಿ ನಡೆದ ಘೋರ ಸಂಗ್ರಾಮದಲ್ಲಿ ಕೇರಳದ ರಾಜನಾದ ಮೇಧಾವಿಯು ಮಡಿದು ಬಿದ್ದು ವೀರಸ್ವರ್ಗವನ್ನೇರಿದ. ಪತಿಯು ಪರಂಧಾಮವನ್ನು ಸೇರಿದ ವರ್ತಮಾನವನ್ನು ಕೇಳಿದ ಪರಮ ಪತಿವ್ರತೆ ಚಿತ್ರಭಾನುದೇವಿ ಚಿತೆಯನ್ನೇರಿದಳು. ಹುಟ್ಟಿದ ಮಗುವಿಗೆ ಈಗ ದಿಕ್ಕಿಲ್ಲದಂತಾಯಿತು. ಅನಾಥವಾಗಿ ತೊಟ್ಟಿಲಲ್ಲಿ ಮಲಗಿರುವ ಮಗುವನ್ನು ಒಬ್ಬಳು ದಾಸಿ ಎತ್ತಿಕೊಂಡು ಅದರ ಪ್ರಾಣ ಉಳಿಸಲು ಅರಮನೆಯಿಂದ ಹೊರಗೆ ಹೊರಟು ಹೋದಳು. ಆಕೆ ಮಗುವನ್ನೆತ್ತಿಕೊಂಡು ಊರೂರು ಅಲೆಯುತ್ತ ಜೀವನಕ್ಕೆ ಬೇರೆ ದಾರಿಯಿಲ್ಲದೆ ಭಿಕ್ಷೆ ಎತ್ತಿ ಜೀವಿಸತೊಡಗಿದಳು.ಹೀಗೆ ತೊಳಲಿ ಬಳಲಿ ಆ ಅಜ್ಜಿ ಕುಂತಳ ನಗರಕ್ಕೆ ಬಂದಳು. ಅವಳಿಗಂತೂ ಮಗುವಿನ ಮೇಲೆ ಗಾಢವಾದ ಪ್ರೀತಿ ಇತ್ತು. ಕುಂತಳ ನಗರದಲ್ಲೇ ನೆಲೆ ನಿಂತು ಮಗುವನ್ನು ಅತ್ಯಂತ ಪ್ರೀತಿಯಿಂದ ಸಾಕಿ ಸಲಹುತ್ತಿದ್ದಳು. ಹೀಗೆ ಬೆಳೆದ ಚಂದ್ರಹಾಸನು ತನ್ನ ಪ್ರಾಯದ ಮಕ್ಕಳೊಡನೆ ನಾನಾ ವಿಧವಾದ ಆಟಗಳನ್ನು ಆಡುವನು. ಹೀಗೆ ಆಟವಾಡುತ್ತಿರುವಾಗ ದಾರಿಯಲ್ಲಿ ಪೂರ್ವ ಜನ್ಮ ಸುಕೃತ ಫಲದಿಂದಲೋ ಎಂಬಂತೆ ಆ ಶಿಶುವಿನ ಕಣ್ಣಿಗೆ ಮನೋಹರವಾದ ಸ್ವಯಂ ಪ್ರಕಾಶಿಸುವ ಸಣ್ಣದಾದ ಸಾಲಿಗ್ರಾಮ ಶಿಲೆಯು ಸಿಕ್ಕಿತು. ಚಂದ್ರಹಾಸನು ಸದಾ ಎಚ್ಚರಿಕೆಯಿಂದ ಆಟಗಳನ್ನು ಆಡುವಾಗಲೂ ಊಟ ಮಾಡುವಾಗಲೂ ಬಹಳ ಜಾಗರೂಕತೆಯಿಂದ ಪವಿತ್ರವಾದ ಸಾಲಿಗ್ರಾಮವನ್ನು ತನ್ನ ಅಂಗೈಲಿಟ್ಟುಕೊಳ್ಳುತ್ತಲಿದ್ದನು. ಉಳಿದ ಕಾಲದಲ್ಲಿ ತನ್ನ ಬಾಯಲ್ಲೆ ಇಟ್ಟುಕೊಂಡು ಇರುತ್ತಿದ್ದನು. ಈ ತೆರನಾಗಿ ಆಡುತ್ತಿದ್ದ ಮಗುವಿಗೆ ಐದು ವರ್ಷಗಳು ತುಂಬಿತು.

ಆ ವೇಳೆಗಾಗಲೇ ಪ್ರಬಲನಾಗಿ ಮೆರೆಯುತ್ತಿದ್ದ ದುಷ್ಟಬುದ್ಧಿಯೆಂಬುವನು ಕುಂತಳ ದೇಶದ ಮುಖ್ಯಮಂತ್ರಿಯಾಗಿ ಅಧಿಕಾರದಲ್ಲಿದ್ದನು. ಅವನು ಪಂಡಿತರಾದ ಬ್ರಾಹ್ಮಣರಿಗೆ ಅನ್ನ ಸಂತರ್ಪಣೆಯನ್ನು

ಇಟ್ಟುಕೊಂಡಿದ್ದನು. ಬ್ರಾಹ್ಮಣ ಶ್ರೇಷ್ಠರು ಮಂತ್ರಿಯ ಅರಮನೆಯ ಜಗಲಿಯಲ್ಲಿ ಆರಾಮವಾಗಿ ಕುಳಿತಿದ್ದರು. ದುಷ್ಟಬುದ್ಧಿಯ ಅರಮನೆಯ ಮುಂದೆ ತನ್ನ ಜೊತೆಯ ಮಕ್ಕಳೊಡನೆ ಆಟವಾಡುತ್ತಿದ್ದ ಆ ಮಗುವನ್ನು ಬ್ರಾಹ್ಮಣಶ್ರೇಷ್ಠರು ಕಂಡರು. ಆ ಬಾಲಕನ ರಾಜ ಲಕ್ಷಣದಿಂದೊಪ್ಪುವ ಸರ್ವಾಂಗವನ್ನು ನೋಡಿ ಮೆಚ್ಚಿಕೊಂಡು ಆಶ್ಚರ್ಯಪಟ್ಟರು. ಇಲ್ಲಿ ಆಡುತ್ತಿರುವ ಸರ್ವಲಕ್ಷಣದಿಂದೊಪ್ಪುವ ಈ ಹುಡುಗನು ಯಾರ ಕುಮಾರನು ? ಈತನು ಎಲ್ಲಿಂದ ಬಂದನು ? ಎಂದು ಆ ಪಾರ್ವರು ದುಷ್ಟಬುದ್ಧಿಯನ್ನು ವಿಚಾರಿಸಲು ಆ ಮಂತ್ರಿವರ್ಯನು ಅಟ್ಟಹಾಸದಿಂದ ನಸುನಗುತ್ತ ಈ ತೆರನಾಗಿ ಅನಾಥರಾಗಿರುವ ಗೊತ್ತುಗುರಿಯಿಲ್ಲದ ಪರದೇಶಿ ಮಕ್ಕಳು ನಮ್ಮ ಕುಂತಳ ನಗರದಲ್ಲಿ ಎಷ್ಟು ಮಂದಿಯಿಲ್ಲ, ಸಹಸ್ರಾರು ಮಂದಿ ಇರುವರು. ಇವನು ಯಾರು ? ಎಲ್ಲಿಯವನೆಂಬ ವಿಚಾರವನ್ನು ನಾನು ತಿಳಿಯೆನು ಎಂದು ಲೋಕಾಭಿರಾಮವಾಗಿ ನುಡಿದನು. ಆಗ ಆ ಬ್ರಾಹಣೋತ್ತಮರು ಅಯ್ಯಾ ಮಂತ್ರಿವರ್ಯನೇ, ಚಾರುಲಕ್ಷಣದಿಂದೊಪ್ಪುವ ಈ ಬಾಲಕನೇ ಮುಂದೆ ಈ ಕುಂತಳದ ಅರಸನಾಗುವನು. ನಮ್ಮ ಮಾತು ಎಂದಿಗೂ ತಪ್ಪುದು. ಮುಂದೆ ದೊರೆಯಾಗಲಿರುವ ಈ ಬಾಲಕನನ್ನು ನೀನು ನಿನ್ನ ಮನೆಯಲ್ಲಿಟ್ಟು ತಂದೆಯೋಪಾದಿಯಲ್ಲಿ ರಕ್ಷಿಸಿ ಸಾಕಿ ಸಲಹುವುದು. ಇದರಿಂದ ನಿನಗೆ ಮುಂದೆ ಒಳಿತಾಗುವುದು ಎಂದು ಭವಿಷ್ಯ ನುಡಿದರು.

ಆಳವಾದ ಮಡುವು ಅನೇಕಾನೇಕ ಭಯಂಕರವಾದ, ಬೃಹದಾಕಾರದ ಮೊಸಳೆಗಳಿಂದ ತುಂಬಿದ್ದು ಮೇಲಿನ ನೋಟಕ್ಕೆ ಆ ಸರೋವರದ ತಿಳಿಯಾದ ತಿಳಿನೀರು ಮನೋಹರವಾಗಿ ಕಾಣುವಂತೆ ದುಷ್ಟಬುದ್ಧಿಯ ಹೊರನೋಟವಿತ್ತು. ಅವನು ತನ್ನ ಮನಸ್ಸಿನಲ್ಲಿ ಅತ್ಯಂತ ಕ್ರೂರವಾದ ಯೋಚನೆಗಳನ್ನು ಹೊಂದಿದ್ದವನು. ಅವನು ಈ ರೀತಿ ಯೋಚಿಸುತ್ತಿದ್ದನು. ಈ ಕುಂತಳ ದೇಶದ ದೊರೆಗೆ ಗಂಡು ಮಕ್ಕಳಿಲ್ಲ. ಈ ದೇಶದ ಸಂಪೂರ್ಣ ಅಧಿಕಾರವು ಈಗಾಗಲೇ ಮುಖ್ಯಮಂತ್ರಿಯಾದ ನನ್ನ ಕೈಗೆ ಬಂದಿದೆ. ನಾನು ಸರ್ವತಂತ್ರ ಸ್ವತಂತ್ರನಾಗಿ ರಾಜ್ಯದ ಆಡಳಿತವನ್ನು ನೋಡಿಕೊಳ್ಳುತ್ತಿರುವೆನು. ಈ ದೇಶದ ಭವಿಷ್ಯ ನನ್ನ ಕೈಯಲ್ಲಿದೆ. ಈ ವಿಪ್ರರು ಭವಿಷ್ಯವನ್ನು ನುಡಿದು ಎಚ್ಚರಿಸಿದ್ದಾರೆ. ಈ ಅನಾಥಮಗುವು ದೇಶದ ರಾಜನಾಗುವನೆಂಬ ಜೋತಿಷ್ಯಶಾಸ್ತ್ರಜ್ಞರಾದ ಅವರ ಮಾತು ಎಂದೂ ಸುಳ್ಳಾಗದು. ಇವನು ನನ್ನ ಮಕ್ಕಳಿಗೆ ಸಿಗಬೇಕಾದ ರಾಜ್ಯವನ್ನು ಆಳುವನು. ಅನಾಯಾಸವಾಗಿ ನನ್ನ ಕೈಸೇರಿರುವ ಈ ದೇಶ ಕೋಶ ಸಂಪತ್ತು ಅಷ್ಟೈಶ್ವರ್ಯ ಎಲ್ಲವೂ ಕಂಡವರ ಪಾಲಾಗುವುದು. ಇದನ್ನು ಈಗಿಂದೀಗಲೇ ತಪ್ಪಿಸಬೇಕು ಎಂದು ದುಷ್ಟನಾದ ದುರ್ಬುದ್ಧಿಯವನಾದ ದುಷ್ಟಬುದ್ಧಿಯು ಯೋಚಿಸಿ ಬೇರೊಂದು ಉಪಾಯವನ್ನು ತನ್ನ ಮನಸ್ಸಿನಲ್ಲಿ ಚಿಂತಿಸಿ ಕಟುಕರಿಬ್ಬರನ್ನು ಕರೆದು ಗುಟ್ಟಾಗಿ ಈ ರೀತಿ ಅಜ್ಞಾಪಿಸಿದನು.

ನಿರ್ಜನವಾದ ಅರಣ್ಯಕ್ಕೆ ಆ ಶಿಶುವನ್ನು ಒಯ್ದು ಕೊಲೆಗೈದು ಏನಾದರೊಂದು ಗುರುತನ್ನು ತಂದು ತೋರಿಸುವುದೆಂದು ಆ ಮಂತ್ರಿಯು ಕೊಲೆಗಡುಕರಾದ ಚಂಡಾಲರಿಗೆ ಅಜ್ಞಾಪಿಸಿದನು. ಅವನ ಆಜ್ಞೆಯಂತೆ ಪಶು ಘಾತಕಿಗಳೂ, ಕೊಲೆಗಡುಕರೂ ಆದ ಆ ಒರಟು ಕಟುಕರು ಆಟವಾಡುತ್ತಿದ್ದ ಆ ಬಾಲಕನ ಬಳಿಗೆ ಬಂದು ನಿರ್ದಯದಿಂದ ಆ ಶಿಶುವನ್ನು ಎತ್ತಿಕೊಂಡು ಹೆಗಲ ಮೇಲೆ ಕುಳ್ಳಿರಿಸಿಕೊಂಡು ಕಾಡಿಗೆ ಹೊರಟರು. ಚಂಡಾಲರು ಭರದಿಂದ ಮಗುವನ್ನು ಹಿಡಿದುಕೊಂಡು ಒಯ್ಯುತ್ತಿರುವಾಗ ಆ ಬಾಲಕನು ಬಹಳವಾಗಿ ಬೆದರಿ ತನ್ನ ಬಾಯೊಳಗೆ ಯಾವಾಗಲೂ ಇರಿಸಿಕೊಂಡಿದ್ದ ದಿವ್ಯವಾದ ಸಾಲಿಗ್ರಾಮದ ಶಿಲೆಯ ಮಹಿಮೆಯಿಂದ, ನನಗೆ ದಾರಿ ತೋರೋ ಪ್ರಭು ಹೇ ಮುರಹರಿ, ಕಮಲದಂತೆ ಕಣ್ಣುಳ್ಳ ಕಮಲಾಕ್ಷನೆ, ಮುರನೆಂಬ ರಕ್ಕಸನನ್ನು ನಾಶಮಾಡಿದ ಮುರಹರಿಯೆ, ಪ್ರಹ್ಲಾದನನ್ನು ಕಾಪಾಡಿದ ನರಹರಿಯೆ, ಗರುಡ ವಾಹನನೆ, ಸಲಹು ಸಲಹು ಪಾಹಿಮಾಂ, ಪಾಹಿಮಾಂ ಎಂದು ಗಟ್ಟಿಯಾಗಿ ಚೀರುತ್ತಾ ಪರಮಾತ್ಮನ ನಾಮಸ್ಮರಣೆ ಮಾಡುತ್ತಿದ್ದನು. ಆಗ ಇದ್ದಕ್ಕಿದ್ದಂತೆ ಆ ಕಟುಕರ ಮನಸ್ಸು, ಆ ಖೂಳರ ಹೃದಯವೂ ಪರಿವರ್ತನೆಗೊಂಡಿತು. ಅವರು ಕರುಣೆಯಿಂದ ಅವನನ್ನು ನೋಡಿದರು. ಅವರ ಕಲ್ಲಿನಂತೆ ಕಠಿಣವಾದ ಮನಸ್ಸು ಕರಗಿ ನೀರಾಯಿತು.

ಶ್ರೀಹರಿಯ ನಾಮಸ್ಮರಣೆಯು ಎಂತಹ ಅದ್ಭುತವನ್ನಾದರೂ ಸಾಧಿಸಬಲ್ಲುದು, ಪರಮಾತ್ಮನ ಮಹಿಮೆ ಅಪಾರವಾದುದು, ಪರಹಿಂಸಕರಾದ ಆ ಕಟುಕರು ಆ ಬಾಲಕನನ್ನು ಅರಣ್ಯಕ್ಕೆ ಒಯ್ದು ಒಂದು ಕಲ್ಲು ಬಂಡೆಯ ಮೇಲೆ ಕುಳ್ಳಿರಿಸಿದರು. ಬಾಲಕನ ಮುದ್ದಾದ ಮುಖನೋಡಿ ವ್ಯಸನಪಟ್ಟು ನಿಟ್ಟುಸಿರು ಬಿಟ್ಟರು. ಕ್ರೂರಾತ್ಮನಾದ ದುಷ್ಟಬುದ್ಧಿಯು ನಿಯೋಜಿಸಿದ ಕಾರ್ಯಕ್ಕೆ ಅವನನ್ನು ಚೆನ್ನಾಗಿ ತಮ್ಮ ಮನಸ್ಸಿನಲ್ಲಿ ಬೈದುಕೊಂಡರು. ಅವರು ಶಿಶುವಧೆಗೆ ಅಳುಕಿ ಆ ಬಾಲಕನನ್ನೇ ನೋಡುತ್ತಿದ್ದರು. ಹೀಗೆ ನೋಡುತ್ತಿದ್ದಾಗ ಬಾಲಕನ ಎಡಗಾಲಿನಲ್ಲಿ ಆರು ಬೆರಳಿರುವುದನ್ನು ಕಂಡರು. ಆಗ ಆವರಿಗೆ ಥಟ್ಟನೆ ಒಂದು ಯೋಚನೆ ಹೊಳಿಯಿತು. ಮಗುವನ್ನು ಕೊಲ್ಲದೆ ಅಲ್ಲೇ ಬಿಟ್ಟು, ತಕ್ಷಣವೇ ಅವರು ಅರನೆಯ ಬೆರಳನ್ನು ಕತ್ತರಿಸಿ ಗುರುತಿಗಾಗಿ ದುಷ್ಟಬುದ್ಧಿಯ ಬಳಿಗೆ ಕೊಂಡೊಯ್ದು ತೋರಿಸಿದರು. ದುಷ್ಟಬುದ್ದಿಗೆ ಯಾವ ಸಂಶಯವೂ ಬಾರದೆ ತನ್ನ ಶತ್ರುವು ಅಳಿದನೆಂದು ಭಾವಿಸಿ ತನ್ನ ಮನಸ್ಸಿನಲ್ಲಿ ಸಂತೋಷಿಸಿದನು.ಆ ಕಟುಕರನ್ನು ಹೊಗಳಿ ಬಹುಮಾವನ್ನು ಕೊಟ್ಟು ಕಳುಹಿಸಿದನು. ತಾನು ನಿಶ್ಚಿಂತೆಯಿಂದ ಕಾಲ ಕಳೆಯುತ್ತ ತಾನು ಎಣಿಸಿದಂತೆ ಕಾರ್ಯವು ನಡೆಯಿತೆಂದು ಮಹದಾನಂದ ತಾಳಿದವನಾದನು.

2. ಚಂದ್ರಹಾಸನ ವೃತ್ತಾಂತವನ್ನು ಕೇಳಲು ಸಮಯವಲ್ಲ ಎಂದ ನಾರದರಿಗೆ ಅರ್ಜುನನು ಏನೆಂದು ಬಿನ್ನವಿಸಿದನು ?

3. ಚಂದ್ರಹಾಸನು ಕುಂತಳ ನಗರವನ್ನು ಸೇರಿದುದು ಹೇಗೆ ?

4. ಬ್ರಾಹ್ಮಣಶ್ರೇಷ್ಠರು ಚಂದ್ರಹಾಸನನ್ನು ನೋಡಿ ದುಷ್ಟಬುದ್ಧಿಗೆ ಏನೆಂದು ಹೇಳಿದರು ?

5. ಬ್ರಾಹ್ಮಣರ ಭವಿಷ್ಯವಾಣಿಯನ್ನು ಕೇಳಿ ದುಷ್ಟಬುದ್ಧಿಯು ಏನು ಮಾಡಿದನು ?

6. ಚಂಡಾಲರು ಚಂದ್ರಹಾಸನನ್ನು ಕೊಲ್ಲದೆ ಇರಲು ಕಾರಣವೇನು ?

7. ಸುಮಾರು 100 ಶಬ್ದಗಳಿಗೆ ಮೀರದಂತೆ ಈ ಕೆಳಗಿನ ಗದ್ಯಭಾಗದ ಸಾರವನ್ನು ನಿಮ್ಮ ಸ್ವಂತ ಮಾತುಗಳಲ್ಲಿ ಬರೆಯಿರಿ : **25**

ವಿ.ಸೂ : ಲೇಖನ ಸಂಗ್ರಹವು ಸೂಚಿಸಿರುವುದಕ್ಕಿಂತ ಹೆಚ್ಚು ಅಥವಾ ಕಡಿಮೆ ಇದ್ದರೆ ಅಂಕಗಳನ್ನುಕಳೆಯಲಾಗುವುದು.

ಸಭಾಭವನ ತುಂಬಿದೆ. ಶ್ರೋತೃಗಳಲ್ಲಿ ತಲೆ ಹಣ್ಣಾದ ವೃದ್ಧರಿದ್ದಾರೆ, ಶ್ರೀಮಂತ ಮಹಿಳೆಯರಿದ್ದಾರೆ, ತರುಣರಿದ್ದಾರೆ ಮತ್ತು ಫ್ಯಾಶನ್ ತರುಣಿಯರಿದ್ದಾರೆ. ಪ್ರತಿಯೊಬ್ಬರೂ ಸತ್ಯದ ಸ್ವತಂತ್ರ ಆರಾಧಕರಾದ ಜೆ ಕೃಷ್ಣಮೂರ್ತಿಯವರು ತಮ್ಮ ಹೃದಯದ ಆಧ್ಯಾತ್ಮಿಕಸಮಸ್ಯೆಗಳಿಗೆ ಏನು ಪರಿಹಾರ ಹೇಳುವರೋ ಎಂದು ಆತುರದಲ್ಲಿದ್ದಾರೆ. 65ರಲ್ಲೂ ಕೃಶಾಂಗ ಸುಂದರರಾಗಿರುವ ಕೃಷ್ಣಮೂರ್ತಿ ಎದ್ದು ಮಾತಾಡತೊಡಗುತ್ತಾರೆ :

"ನಿಮಗೆ ನಾನು ಹೇಳುವುದಿಷ್ಟೇ. ಸತ್ಯವನ್ನು ತಲುಪಲು ಪ್ರತಿಯೊಬ್ಬರೂ ನಿಮ್ಮ ನಿಮ್ಮ ಮಾರ್ಗವನ್ನು ನೀವೇ ಶೋಧಿಸಬೇಕಾಗುವುದು. ಯಾವುದನ್ನು ನಿಜ ಅಥವಾ ಈಶ್ವರನೆಂದು ಕರೆಯುತ್ತೀರೋ ಅದು ನಿಜವಾಗಿ ನಿಮ್ಮ ನಿಮ್ಮ ಹೃದಯದ ಪ್ರೇಮಸಾಗರವೇ ಹೊರತು ಬೇರೇನೂ ಅಲ್ಲ, ನೀವು ಮಾಡಬೇಕಾಗಿದ್ದು

ಇಷ್ಟೇ. ನಿಮ್ಮ ಸಾಗರದ ದಡಗಳನ್ನು ಒಡೆದುಬಿಡಿರಿ. ಅದರ ಪ್ರವಾಹ ಮುಕ್ತವಾಗಿ ಎಲ್ಲೆ ಕಟ್ಟಿಲ್ಲದೆ ಹರಿಯಲಿ. ಹೀಗೆ ಸೀಮಾನ್ವಿತರಾಗಿದ್ದವರು ಅಸೀಮರಾದರೇ ನೀವು ಮುಕ್ತರಾಗಬಲ್ಲಿರಿ". ಶ್ರೋತೃಗಳು ಯೋಗಿಯ ಮಾತುಗಳಿಂದ ಪುಲಕಿತರಾಗುತ್ತಾರೆ. ಏನೋ ನೂತನ ಸಂದೇಶ ಪಡೆದವರಂತೆ ಧನ್ಯಭಾವವನ್ನು ಅನುಭವಿಸುತ್ತಾರೆ.

ನಿಜದ ನೆಲೆಯನ್ನರಿಯಲು ಪ್ರತಿಯೊಬ್ಬನೂ ತಂತನ್ನ ದಾರಿಯನ್ನು ತಾನೇ ಅರಸಬೇಕು; ಒಬ್ಬನ ದಾರಿ ಒಬ್ಬನಿಗೆ ಸಲ್ಲದು; ಯಾವ ಧರ್ಮಪಂಥವೂ ಯಾವ ಮತವೂ ಯಾರೂ ಯಾರನ್ನೂ ಉದ್ಧರಿಸಲಾರರು; ನಿಜದ ನೆಲೆಗೆ ಯಾರಿಗೆ ಯಾರೂ ದಾರಿ ತೋರರು ಎಂಬ ಸಂದೇಶವನ್ನು ಬಹಳ ವರ್ಷಗಳಿಂದ ಬಿತ್ತರಿಸುತ್ತ ಸಪ್ತ ಖಂಡಗಳನ್ನು ಸಂಚರಿಸುತ್ತಿದ್ದ ಜಿಡ್ಡು ಕೃಷ್ಣಮೂರ್ತಿಯವರು ಪ್ರಪ್ರಥಮವಾಗಿ ಜಗತ್ತಿನ ಮುಂದೆ ತಾವೇ ಒಬ್ಬ ಉದ್ಧಾರಕರ್ತರಾಗಿ ಒಬ್ಬ ವಿನೂತನ ಕೃಷ್ಣ ಅಥವಾ ಕ್ರಿಸ್ತನಂತೆ, ಬಂದರೆಂಬುದೀಗ ವಿಲಕ್ಷಣವಾದ ಸಂಗತಿ. ಒಬ್ಬನೇ ವ್ಯಕ್ತಿಗೆ ತನ್ನ 33 ನೇ ವಯಸ್ಸಿನವರೆಗೆ ದೈವೀಶಕ್ತಿಯ ಅಂಶವಿದೆಯೆಂದು ಸಾವಿರಾರು ಭಕ್ತರಿಂದ ಆರಾಧಿಸಲ್ಪಟ್ಟು ಅನಂತರ ತನ್ನ ಅವತಾರತ್ವವನ್ನು ತಾನೇ ಅಲ್ಲಗಳೆದು ಉದ್ಧಾರಕರ್ತನೆಂಬವನೇ ಇಲ್ಲವೆಂದು ಉಪದೇಶಿಸುತ್ತ ತಿರುಗುವ ದೈವಯೋಗವುಂಟಾಗುವುದು, ಇತಿಹಾಸದಲ್ಲಿ ಕೃಷ್ಣಮೂರ್ತಿಯವರೊಂದಿಗೇ ಬಂದ ಬುತ್ತಿಯಾಗಿದೆ.

ತೂಕಡಿಸುವ ಗ್ರಾಮವಾಗಿದ್ದ ಮದನಪಳ್ಳಿಯಲ್ಲಿ ತಮ್ಮ ಹನ್ನೆರಡನೇ ವಯಸ್ಸಿನಲ್ಲಿ ಅನಿ ಬೆಸಂಟಮ್ಮ ಮತ್ತು ಸಿ. ಡಬ್ಲ್ಯು ಲೆಡ್‌ಬೀಟ್‌ರರಿಂದ "ಕಂಡುಹಿಡಿಯಲ್ಪಟ್ಟಾಗ" ಲೇ ಜಿಡ್ಡು ಕೃಷ್ಣಮೂರ್ತಿಯವರ ನಂಬಲಾಗದಷ್ಟು ಅಪರೂಪದ ಜೀವನಕಥೆ ಪ್ರಾರಂಭವಾಗುತ್ತದೆ. ಅವು ಬೆಸೆಂಟಮ್ಮ ಮತ್ತು ಥಿಯಸಾಫಿಕಲ್ ಸಂಘದ ಸುವರ್ಣ ದಿನಗಳಾಗಿದ್ದವು. ಕೃಷ್ಣಮೂರ್ತಿಯ ತಂದೆ ಮದ್ರಾಸಿನಲ್ಲಿ ಬಡ ಬ್ರಾಹ್ಮಣ ಕಾರಕೂನರಾಗಿದ್ದರು. ಆದರೆ ಅಪ್ಸರ ಸದೃಶವಾದ ನಗೆಯಿಂದ ತಳತಳಿಸುವ ಕಣ್ಣುಗಳ ಈ ಹುಡುಗನಲ್ಲಿ ಬೆಸೆಂಟಮ್ಮ ಯಾವುದೋ ಆಕರ್ಷಣೆಯನ್ನು ಕಂಡರು. ಬೆಸೆಂಟಮ್ಮ ಮಹಾಮಹಿಳೆಯಾಗಿದ್ದರೇನೋ ಸರಿ. ಆದರೆ ಅವರ ಕಲ್ಪನಾಶಕ್ತಿಗೆ ಯಾವ ಕಟ್ಟುಪಾಡೂ ಇದ್ದಿಲ್ಲ. ಥಿಯಸಾಫಿಕಲ್ ಸಂಘದ ಅಧ್ವರ್ಯುಗಳಾಗಿದ್ದ ಅವರೂ ಲೆಡ್‌ಬೀಟರರೂ ಆಧ್ಯಾತ್ಮಿಕ, ಅಲೌಕಿಕ ಮತ್ತು ಪಾರಲೌಕಿಕಗಳ ಆರಾಧಕರಾಗಿದ್ದರು. ಅವರು ಈ ಹುಡುಗ ದೈವೀ ಅವತಾರ, ದುಃಖಜರ್ಜರಿತ ಜಗತ್ತಿನ ಭಾವೀ ಉದ್ಧಾರಕರ್ತ ಎಂದು ಹೇಗೋ ತಮ್ಮನ್ನು ತಾವೇ ನಂಬಿಸಿಕೊಂಡರು.

ಅಂದಿನಿಂದ ಮದ್ರಾಸಿನ ಅಡಯಾರಿನ ಸುಂದರ ಥಿಯಸಾಫಿಕಲ್ ಕೇಂದ್ರದಲ್ಲಿ ಈ ಬಡ ಹುಡುಗ ಆರಾಧ್ಯ ವಸ್ತುವಾದ ಥಿಯಸಾಫಿಯ ಭಕ್ತರು ಅವನನ್ನು ಕುರಿತು ಮೆಲುದನಿಯಲ್ಲಿ ಒಬ್ಬರಿಗೊಬ್ಬರು ಗಂಭೀರ ವಾರ್ತೆಯನ್ನು ಉಸುರತೊಡಗಿದರು. ಬೆಸೆಂಟಮ್ಮ ಅವನನ್ನೂ ಅವನ ತಮ್ಮ ನಿತ್ಯಾನಂದನನ್ನೂ ತಮ್ಮ ಆಶ್ರಯದಲ್ಲಿ ತೆಗೆದುಕೊಂಡರು. ಈಗ ಈ ನೂತನ ಬಾಲಕೃಷ್ಣನಿಗೆ ಅಲಭ್ಯವಾದ ಪದಾರ್ಥವೇ ಇರಲಿಲ್ಲ.

ಅನಿ ಬೆಸೆಂಟಮ್ಮ ಹೋದಲ್ಲೆಲ್ಲ ಬರಲಿರುವ ಉದ್ಧಾರಕರ್ತನನ್ನು ಕುರಿತು ಭಾಷಣ ಮಾಡುತ್ತಿದ್ದರು. 1911ರಲ್ಲಿ ಒಂದು ದಿನ ಕಾಶಿಯಲ್ಲಿ ಮಹಾ ರಹಸ್ಯವೊಂದನ್ನು ಹೊರಗೆಡವಲಾಯಿತು. “ಬಲು ದಿನದಿಂದ ಬರಬೇಕಾಗಿದ್ದ ಉದ್ಧಾರಕರ್ತ, ಮಹಾ ಆಚಾರ್ಯ ಉದಯಸಿದ್ದಾನೆ” ಇದನ್ನು ನಂಬುವವರು ಉದಯರವಿ ಪಂಥ ಎಂದು ತಮ್ಮನ್ನು ಕರೆದುಕೊಂಡಿದ್ದರು.ಆ ಪಂಥಕ್ಕೆ ಈ ಹದಿನಾರು ವರ್ಷದ, ಉದ್ದ ಕೂದಲಿನ. ಕೃಶದೇಹದ, ಸುಂದರ ಕಾಯದ ಕೃಷ್ಣಮೂರ್ತಿ ಅಧಿಪತಿ !

ಕೃಷ್ಣಮೂರ್ತಿಯ ತಂದೆ ಗಾಬರಿಯಾಗಿ ತಮ್ಮೆರಡು ಮಕ್ಕಳ ಪಾಲಕತ್ವವನ್ನು ತಿರುಗಿ ತಮಗೊಪ್ಪಿಸಬೇಕೆಂದು ವ್ಯಾಜ್ಯ ಹೂಡಿದರು. ಅದು ಅಂದಿನ ಅತ್ಯಂತ ಕೋಲಾಹಲಕರ ನ್ಯಾಯಗಳಲ್ಲಿ ಒಂದಾಗಿತ್ತು. ಅದರೆ ಕೃಷ್ಣಮೂರ್ತಿ ಪುನಃ ತಂದೆಗೆ ಸಿಗಲಿಲ್ಲ, ಬೆಸೆಂಟಮ್ಮ ಇಬ್ಬರು ಹುಡುಗರನ್ನು ಯುರೋಪಿಗೆ ಸಾಗಿಸಿದರು. ಯಾವ ಅಗರ್ಭ ಶ್ರೀಮಂತ ಪುತ್ರನಿಗೂ ದೊರೆಯದ ಆದರ, ಪ್ರೇಮ, ಐಶ್ವರ್ಯಗಳಿಂದ ಕೃಷ್ಣಮೂರ್ತಿಯನ್ನು ಭಾವಿ ಜಗದ್ಗುರು ಪದವಿಗಾಗಿ ತರಬೇತುಗೊಳಿಸಲಾಯಿತು. ಯುರೋಪಿನ ಶ್ರೀಮಂತ ಮಹಿಳೆಯರೂ, ಧರ್ಮಬುದ್ದಿಯ ಭಾರತೀಯ ಉದ್ಯೋಗಪತಿಗಳೂ ಅವನಿಗಾಗಿ ಹಣದ ಧಾರೆಯೆರೆದರು. ನಿರ್ದಿಷ್ಟ ಇಂಗ್ಲಿಷ್ ಮತ್ತು ಫ್ರೆಂಚ್ ಶೈಲಿ ಹುಡುಗನಿಗೆ ಕರಗತವಾಯಿತು. ಪೂರ್ವದಿಂದ ಉದಿಸಿದ ಈ ಜಗದ್ಗುರು ಪಶ್ಚಿಮದ ಭಾಷೆಗಳಲ್ಲಿ ರುಗ್ಣ ಜಗತ್ತನ್ನು ಗುಣಪಡಿಸಬೇಕಾಗಿತ್ತೇನೋ.

ಕಲಕತ್ತೆಯಿಂದ ಕೆಲಿಫೋರ್ನಿಯ ವರೆಗಿನ ಮೂವತ್ತು ಸಾವಿರಕ್ಕೂ ಮೇಲ್ಪಟ್ಟ ಶ್ರೀಮಂತ ಸುಶಿಕ್ತ ಜನರು ಆತನನ್ನು ಬರಲಿರುವ ಜಗದುದ್ಧಾರನೆಂದು ಹೃತ್ಪೂರ್ವಕವಾಗಿ ನಂಬಿದ್ದರು. ಕೃಷ್ಣಮೂರ್ತಿಗೆ ಹೋದಹೋದಲ್ಲಿ ಥಿಯಾಸಫಿಸ್ಟರಿಂದ ಪೂಜಿತವಾಗುತ್ತಿತ್ತು. ಮಾಲೆಗಳ ಭಾರದಿಂದ ಅವನ ಶಿರ ಬಾಗುತ್ತಿತ್ತು. ಫೋಟೋಗ್ರಾಫರರ ಕೆಮರಾಗಳು ಕಿಲಿಕಿಲಿಸುತ್ತಿದ್ದವು. ಪ್ರತಿ ವರ್ಷ ಭಕ್ತಾದಿಗಳಿಗೆ ದರ್ಶನ ಕೊಡಲು ಅವನ ಭೂಪ್ರದಕ್ಷಿಣೆಯ ವ್ಯವಸ್ಥೆಯಾಗುತ್ತಿತ್ತು.

ತರುಣ ಕೃಷ್ಣಮೂರ್ತಿ ಈ ವಾತಾವರಣದಲ್ಲಿ ತಾನು ನಿಜವಾಗಿ ಉದ್ದಾರಕರ್ತನ ದೇವೀವಾಣಿಯ “ವಾಹನ” ವಾಗಿದ್ದೇನೆಂದು ನಂಬಿಕೊಂಡರೆ ಸೋಜಗವೇನಿದೆ ? ಟೆನ್ನಿಸ್ ಆಡುವ, ಅತ್ಯಾಧುನಿಕ ಪೋಷಾಕು ಧರಿಸುವ, ವೈಭವಭೋಗಗಳಲ್ಲಿ ಓತಪ್ರೋತನಾದ ಈತ ನಿಜವಾಗಿ ಹೊಸಪರಿಯ ಜಗದ್ಗುರುವೇ ಆಗಿದ್ದನೆಂಬ ಅಂಶ ಅವನ ವಿಪುಲ ಶಿಷ್ಯ ಕೋಟಿಗೇ ಹೊಳೆಯದಿದ್ದಮೇಲೆ ಅನನುಭವಿಯಾದ ಅವನಿಗೆ ಹೇಗೆ ಗೋಚರವಾಗಬೇಕು ? 1925 ರಲ್ಲಿ ಥಿಯಾಸಫಿಕಲ್ ಸಮ್ಮೇಳನದಲ್ಲಿ ಅಡಯಾರಿನ ಜಗತ್ಪ್ರಸಿದ್ಧ ಆಲದ ಮರದ ನೆರಳಲ್ಲಿ ಈ ನವೋದಿತ ಜಗದ್ಗುರು ತನ್ನ ಜಗದ್ಗುರುತ್ವವನ್ನು ಸಾರಿದ: “ನಾನು ಕೆಡಹಲು ಬಂದಿಲ್ಲ ಕಟ್ಟಲು ಬಂದಿದ್ದೇನೆ” ಮತ್ತೆರಡು ವರ್ಷಗಳಲ್ಲಿ ಜಗದ್ಗುರುವಿನ ವಾಣಿ ಇನ್ನೂ ಆತ್ಮವಿಶ್ವಾಸ ಪೂರ್ಣವಾಗಿ ಬಂತು: “ಈ ವರೆಗೆ ಜನ ಮೆಚ್ಚುವಂತೆ ನಾನು ಅಸ್ಪಷ್ಟ ಉತ್ಸರ್ಗರೂಪದಲ್ಲಿ ಮಾತಾಡಿದ್ದೇನೆ. ನಾನೇ ಜಗದ್ಗುರು ಎಂದು ಹೇಳಿಲ್ಲ ಅದರೆ ಈಗ ನಾನು ಆ ಪ್ರೇಮರೂಪಿಯಲ್ಲಿ ಏಕಾತ್ಮನಾದವನೆಂದು ನನಗನಿಸುತ್ತದೆ. ನಾನೀಗ ಹಾಗೆ ಹೇಳುತ್ತೇನೆ.”

ಕಾವ್ಯಮಯವಾಗಿ, ಗಾಢವಾಗಿ ಮಾತಾಡುವ ತಮ್ಮ ಜಗದ್ಗುರುವಿನ ಬಾಷಣಗಳಿಂದ ಥಿಯಾಸಫಿ ಭಕ್ತರು ಭಾವ ನಿರ್ಭರರಾಗುತ್ತಿದ್ದರು. ಉದ್ಧಾರಕನ ನುಡಿಗಳ ಮೇಲೆ ಅಸಂಖ್ಯ ಪ್ರಬಂಧಗಳು, ಚರ್ಚಾಕೂಟಗಳು ನಡೆದವು. ಮುಪ್ಪಿನ ಮುದುಕರು ಅವನ ತತ್ವೋಪದೇಶಗಳನ್ನು ಆಲಿಸುತ್ತಿದ್ದರು. ತರುಣಿಯರು ಅವನ ಸಮ್ಮೋಹನೀಯ ಒಂದು ಸ್ಪರ್ಶಕ್ಕಾಗಿ ಹಾತೊರೆಯುತ್ತಿದ್ದರು.

ಆದರೆ ಜಗದ್ಗುರುವಿನ ಅಂತರಂಗದಲ್ಲಿ ಆಗುತ್ತಿದ್ದ ತುಮುಲದ ಕಲ್ಪನೆ ಯಾವ ಭಕ್ತನಿಗೂ ಇದ್ದಿಲ್ಲ. 1922 ರಲ್ಲೇ ಈ ಅಂತರ್ಮನನ ಪ್ರಾರಂಭವಾಗಿತ್ತು. ಆ ವರ್ಷ ಕೃಷ್ಣಮೂರ್ತಿಯ ತಮ್ಮ ನಿತ್ಯಾನಂದ ಆಕಸ್ಮಾತಾಗಿ ತೀರಿಕೊಂಡ. ರಾಜವೈಭವದಲ್ಲಿ ಬೆಳೆದಿದ್ದ ಕೃಷ್ಣಮೂರ್ತಿಗೆ ಇದೊಂದು ಅನಿರೀಕ್ಷಿತ ಆಘಾತವಾಗಿತ್ತು. ನೋವಿನ ಪ್ರಪಂಚದೊಡನೆ ಅದು ಅವನ ಪ್ರಥಮ ಸಂಪರ್ಕ. ಆಗ ತಿರುಗಿದ ಚಕ್ರ ಒಳಗೊಳಗೇ ಏಳು ವರ್ಷ ಕಾಲ ತಿರುಗಿತು. ಈ ಎಲ್ಲ ನಾಟಕ ಏನು ? ಯಾರು ಉದ್ಧಾರಕ ? ಯಾರು ಉದ್ಧೃತ ?

1929ರಲ್ಲಿ ಏನನ್ನೂ ನಿರೀಕ್ಷಿಸಿರದ ಶಿಷ್ಯ ಕೋಟಿಯ ಮೇಲೆ ಬರಸಿಡಿಲು ಬಂದೆರಗಿತು. ಕೃಷ್ಣಮೂರ್ತಿಯವರು, ಲೆಡ್‌ಬೀಟರ್, ಬೆಸೆಂಟ್, ಜಿ ಎಸ್ ಅರುಂಡೇಲ್, ಲೇಡಿ ಎಮಿಲಿ ಲೂಟೆನ್ಸ್ ಪ್ರವೃತ್ತಿಗಳು ತಮಗಾಗಿ ಕಟ್ಟಿದ ಕನಸಿನ ಅರಮನೆಯಿಂದ ಹೊರಬಿದ್ದು ತಮ್ಮ ಅವತಾರತ್ವವನ್ನು, ಜಗದ್ಗುರುತ್ವವನ್ನು ನಿರಾಕರಿಸಿದರು.

"ಸತ್ಯವೆಂಬುದು ದಾರಿಯಿಲ್ಲದ ನೆಲವೆಂಬುದು ನನಗೆ ಮನವರಿಕೆಯಾಗಿದೆ. ಆದ್ದರಿಂದ ಮತ, ಸಂಪ್ರದಾಯ ಅಥವಾ ಮತ್ತಾವ ಸಿದ್ಧಮಾರ್ಗದಿಂದ ಸತ್ಯವನ್ನು ಸೇರುವುದು ಅಸಾಧ್ಯ. ಮಾರ್ಗವೆಂಬುದೇ ಒಂದು ಬಂಧನವೆಂದು ನಾನೆನ್ನುತ್ತೇನೆ. ಆತ ಆಕಾಶ ವಿಹಾರಿ, ಸ್ವಾನಂದಲೀಲೆಯಲ್ಲೇ ಹಕ್ಕಿಯಂತೆ ಅನಿರ್ಬಂಧವಾಗಿ, ಸ್ವಚ್ಛವಾಗಿ, ಸಹಜವಾಗಿ ಹಾರಬೇಕೆಂದು ಆಶಿಸುತ್ತೇನೆ !".

ತನ್ನಲ್ಲಿ ಏನೂ ಮಹಿಮೆಯಿಲ್ಲ, ಸತ್ಯಶೋಧನೆಯಲ್ಲಿ ದಾರಿ ತೋರುವವ ತಾನಲ್ಲ. ತಾನು ಜಗದ್ಗುರುವಲ್ಲ ಎಂದು ಹೇಳಿ ಕೃಷ್ಣಮೂರ್ತಿಯವರು ತಮ್ಮ ನಕ್ಷತ್ರಪಂಥ (ಉದಯರವಿ ಪಂಥವನ್ನು ನಕ್ಷತ್ರ ಪಂಥವೆಂದು ಬದಲಾಯಿಸಲಾಗಿತ್ತು)ವನ್ನು ವಿಸರ್ಜಿಸಿಬಿಟ್ಟರು. ಥಿಯಸಾಫಿಕಲ್ ಸಂಘದ ತಳಕಟ್ಟು ಸಹಿತ ಅಲುಗಿತು. ಶಿಷ್ಯರು ದಿಙ್ಮೂಢರಾದರು. ಕುರಿಹಿಂಡು ಕುರುಬನನ್ನು ಕಳೆದುಕೊಂಡಿತು.

ಥಿಯಸಾಫಿಕಲ್ ಸೊಸೈಟಿ ಇಬ್ಬಣವಾಯಿತು. ಕೆಲವರು ಗುರುತ್ವವನ್ನು ನಿರಾಕರಿಸಿದ ಕೃಷ್ಣಮೂರ್ತಿಯ ಮಾರ್ಗವೇ ಸರಿಯೆಂದರು. ಅನಿಬೆಸಂಟಮ್ಮನಿಗಾದ ಆಘಾತವನ್ನು ಊಹಿಸಿಯೇ ತಿಳಿಯಬೇಕು. ಆದರೆ ಉದ್ಧಾರಕರ್ತನ ಕನಸನ್ನು ಕಾಲು ಶತಮಾನ ಕಾಲ ಕಾಣುತ್ತಿದ್ದ ಆ ಮಹಾಮಾನಿನಿ ಈ ಹೊಡೆತ ಬಿದ್ದ ಮೇಲೂ ಕನಸಿನಿಂದ ಹೊರಬರಲು ಒಪ್ಪಲಿಲ್ಲ. 1933 ರಲ್ಲಿ ಕೊನೆಯುಸಿರು ಬಿಡುವವರೆಗೂ ಅನಿ ಬೆಸೆಂಟಮ್ಮ ಕೃಷ್ಣಮೂರ್ತಿಯವರನ್ನು ಗುರವೆಂದೇ ದೃಢವಾಗಿ ನಂಬಿದ್ದರು.

ಅಂದಿವಿರದ ಜಿಡ್ಡು ಕೃಷ್ಣಮೂರ್ತಿಯವರು ಕ್ರಾಂತಿಕಾರಿ ವಿಚಾರದ ತತ್ವಜ್ಞಾನಿಯಾಗಿದ್ದರು. ಅವರು ಆಧ್ಯಾತ್ಮಿಕ ಅರಾಜಕತೆಯ ಪ್ರಚಾರಕರಾಗಿದ್ದರು, ದೈವೀಶಕ್ತಿಯ ಆರಾಧನೆಗೆ ಯಾವ ಪಂಥ, ಯಾವ ಧರ್ಮ, ಯಾವ ಮತ ಯಾವ ದೇವಾಲಯವೂ ಬೇಡ ಎಂದವರು ಸಾರಿದ್ದರು. "ಒಳ್ಳೆಯವರಾಗಿರಿ !" ಎಂದವರು ಉಪದೇಶಿಸಿದರು. "ಸುಖಿಯಾಗಿರಿ ಅಂದರೆ ಒಳ್ಳೆಯವರಾಗಿರುತ್ತೀರಿ" ಎಂದೂ ಸೂಚಿಸಿದರು.

ಯಾವ ತರದ ಸಂಘಟಿತ ಧರ್ಮಪಂಥಗಳೂ ಬೇಡವೆಂದು ವಾದಿಸುವ ಕೃಷ್ಣಮೂರ್ತಿಗಳಿಗೆ ಈಗಲೂ ಶಿಷ್ಯಕೋಟಿಗೆ ಕೊರತೆಯಿಲ್ಲ. ಅವರ ತತ್ವವಿಚಾರ ಕೇಳಲು ಹಾತೊರೆಯುವವರಿದ್ದೇ ಇದ್ದರು. ತಮ್ಮ ಸಿದ್ಧಾಂತದ ಪ್ರಚಾರಕ್ಕೆ ವರ್ಷ ವರ್ಷವೂ ಅವರು ದೇಶದಿಂದ ದೇಶಕ್ಕೆ ಸಂಚರಿಸಿದರು. ಅವರ ವ್ಯಕ್ತಿತ್ವದ ಲೋಹಚುಂಬಕತೆ ಅಪೂರ್ವವಾಗಿತ್ತು. ಪಂಡಿತ ಜವಹಾರಲಾಲರ ನಂತರ ಅವರಷ್ಟು ಆಕರ್ಷಕ ವ್ಯಕ್ತಿತ್ವ ಭಾರತದಲ್ಲಿ ಈಚೆಗೆ ಹುಟ್ಟಿಲ್ಲ ಎನ್ನುವರುಂಟು.

ಜವಹರಲಾಲರ ಹಾಗೆ ಕೃಷ್ಣಮೂರ್ತಿಯವರೂ ವಿದೇಶಿ ಸಂಸ್ಕೃತಿಯನ್ನು ಅರಗಿಸಿಕೊಂಡ ಭಾರತೀಯ. ಆದರೆ ನೆಹರೂ ಹಾಗೆ ಅವರ ಬೇರು ಭಾರತದಲ್ಲಿ ಇಳಿದಿಲ್ಲ. ಫ್ರೆಂಚನ್ನು ನೀರು ಕುಡಿದಂತೆ ಮಾತಾಡಬಲ್ಲ ಅವರು ತಮ್ಮ ಮಾತೃಭಾಷೆ ತೆಲುಗನ್ನು ಮರೆತಂತೆಯೆ ಆಗಿದ್ದರು, ಅವರು ಹೆಚ್ಚಾಗಿ ಯುರೋಪಿನಲ್ಲಿ, ತುಟ್ಟಿಯಾದ ಹೋಟೆಲುಗಳಲ್ಲಿ ಸುಖಜೀವನ ನಡೆಸಿದ್ದರು, ಆಗೊಮ್ಮೆ ಈಗೊಮ್ಮೆ ಭಾರತಕ್ಕೆ ಭೆಟ್ಟಿಕೊಟ್ಟು ಉಪದೇಶಾಮೃತವನ್ನು ಸೂಸಿ ಹೋಗುತ್ತಿದ್ದರು.

ಈ ಮನುಷ್ಯ ಸುಖವಸ್ತು, ಬಡತನ, ದುಃಖಗಳನ್ನು ಈತ ಪರಿಚಯ ಮಾಡಿಕೊಂಡಿಲ್ಲ. ಈತ ಎಷ್ಟು ನೀರಿನ ತತ್ವಜ್ಞಾನಿ ? ಎನ್ನುವವರುಂಟು.ಆದರೆ ತನ್ನನ್ನು ದೇವತ್ವಕ್ಕೇರಿಸುತ್ತಿದ್ದವರನ್ನು ಧಿಕ್ಕರಿಸಿ ಜಗದ್ಗುರುತ್ವದ ಬಂಗಾರದ ಸಂಕೋಲೆಯನ್ನು ಮುರಿದೊಗೆಯುವ ಧೈರ್ಯ ಮಾಡಿದವರು ಕೃಷ್ಣಮೂರ್ತಿ. ಜಗದುದ್ಧಾರಕನಾಗಲೊಲ್ಲದ ಮನುಷ್ಯನೆನಿಸುವ ಎದೆಗಾರಿಕೆ ಎಲ್ಲರಿಗೆ ಬರುವ ಪದಾರ್ಥವಲ್ಲ. ಅಲ್ಲೇ ಇದೆ ಅವರ ಹಿರಿಮೆ.

8. ಕೆಳಗಿನ ಗದ್ಯಭಾಗವನ್ನುಕನ್ನಡಕ್ಕೆ ಭಾಷಾಂತರಿಸಿ : **25**

When compared with the infinite expance of the universe, man is tinier than an infinitesimal speck of dust. A study of the colossal celestial bodies will convince us that man is just like a drop in the ocean in comparison. However science has brought to light the 'ocean' hiding in the 'drop'. If the structure of human body and the modus operandi of the different organs are surprising enough, the myriads of complex activities going on with machine like precision round the clock in every cell are amazing beyond belief. Is it not surprising that a drop of human blood contains as many as 5 million red corpuscles and 5 lakh platelets ? While the macrocosm with its unimaginable enormity is a wonder on all counts, the microscopical cells are by no means a lesser wonder. The human mind that has grasped these two phenomena is without doubt the wonder of all wonders. As Dr. Alexis correl has opined, the human mind can grasp both the infinitesimally minute electron and the mighty stars twinkling in the sky. Hundreds of light years away through abstract reasoning in mathematics. A famous mathematician mystic has eulogized the glory and greatness of the human mind in these words. In space the universe engulfs me and reduces me to a pin point. But through thought, I understand that universe.

9. ಕೆಳಗಿನವುಗಳಲ್ಲಿ ಒಂದನ್ನು ಕುರಿತು 100 ಪದಗಳಿಗೆ ಮೀರದಂತೆ ಪತ್ರಿಕಾಸಂಪಾದಕರಿಗೆ ಒಂದು ಪತ್ರ ಬರೆಯಿರಿ. **1 × 10**

(ಅ) ಯೋಜನೆಗಳೇ ಯಶಸ್ಸಿನ ಮೈಲಿಗಲ್ಲುಗಳು

(ಆ) ಪ್ರಾಚೀನ ಸ್ಮಾರಕಗಳನ್ನು ರಕ್ಷಿಸುವಲ್ಲಿ ಯುವ ಜನತೆಯ ಪಾತ್ರ

(ಇ) ಸಾವಯವ ಕೃಷಿ ಇಂದಿನ ಅಗತ್ಯತೆಯಾಗಿದೆ.

ಈ ಕೆಳಗಿನ ಗಾದೆಗಳಲ್ಲಿ ಎರಡರ ಅರ್ಥ ಸ್ವಾರಸ್ಯವನ್ನು ವಿವರಿಸಿ. **2 × 5 = 10**

10. ಆಳಾಗ ಬಲ್ಲವನು ಅರಸಾಗಬಲ್ಲ

**ಅಥವಾ**

ಮಾತು ಬಲ್ಲವನಿಗೆ ಜಗಳವಿಲ್ಲ ಊಟಬಲ್ಲವನಿಗೆ ರೋಗವಿಲ್ಲ.

11. ಸಗಣಿಯವನ ಕೊಡೆ ಸರಸಕ್ಕಿಂತ ಗಂಧದವನ ಕೂಡೆ ಗುದ್ದಾಟ ಮೇಲು.

**ಅಥವಾ**

ಹಾಸಿಗೆ ಇದ್ದಷ್ಟು ಕಾಲು ಚಾಚು.

ಈ ಕೆಳಗಿನ ನುಡಿಗಟ್ಟುಗಳಲ್ಲಿ ಎರಡರ ಅರ್ಥ ವಿವರಿಸಿ ಅವುಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿ.

**2 × 3 = 6**

12. ಮುಖಭಂಗ ಮಾಡು

**ಅಥವಾ**

ಹದ್ದು ಮೀರು

13. ಶಿರಸಾವಹಿಸು

**ಅಥವಾ**

ನುಚ್ಚುನೂರಾಗು

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ : **4 × 1 = 4**

14. ಆದಿ ಕವಿ ಪಂಪನು ಯಾವ ರಾಜನ ಆಶ್ರಯದಲ್ಲಿದ್ದನು ?

15. ಕುಮಾರವ್ಯಾಸನ ನಿಜ ನಾಮಧೇಯವೇನು ?

16. ಇಂಗ್ಲೀಷ್ ಗೀತೆಗಳು ಕವನಸಂಕಲನ ಬರೆದ ಕವಿಯಾರು ?

17. ಕರ್ನಾಟಕ ಸಂಗೀತ ಪಿತಾಮಹ ಎಂದು ಯಾರನ್ನು ಕರೆಯುತ್ತಾರೆ ?

ಈ ಕೆಳಗಿನವುಗಳಲ್ಲಿ ಐದಕ್ಕೆ ತತ್ಸಮ-ತದ್ಭವ ರೂಪಗಳನ್ನು ಬರೆಯಿರಿ : **5 × 1 = 5**

18. ಹದಿಬದೆ

**ಅಥವಾ**

ಪಾದುಕಾ

ಉತ್ತರ : ______________________________

19. ಸಕ್ಕರೆ

**ಅಥವಾ**

ವಲ್ಲಿ

ಉತ್ತರ : ______________________________

20. ಬ್ರಹ್ಮ

**ಅಥವಾ**

ಮಿಗ

ಉತ್ತರ : ______________________________

21. ದ್ಯೂತ

**ಅಥವಾ**

ಕುಕ್ಕುಟ

ಉತ್ತರ : ______________________________

22. ಕೂಷ್ಮಾಂಡ

**ಅಥವಾ**

ಅಂಗುಷ್ಠ

ಉತ್ತರ : ______________________________

ಈ ಕೆಳಗಿನವುಗಳಲ್ಲಿ ಐದನ್ನು ಬಿಡಿಸಿ ಬರೆಯಿರಿ : **5 × 1 = 5**

23. ಪನ್ನಗಾಭರಣ

**ಅಥವಾ**

ಗುರುವನ್ನು

ಉತ್ತರ : ____________________

24. ಕಂಬನಿ

**ಅಥವಾ**

ದೇವೇಂದ್ರ

ಉತ್ತರ : ____________________

25. ಸರ್ವೋದಯ

**ಅಥವಾ**

ಲೋಕೈಕವೀರ

ಉತ್ತರ : ____________________

26. ಚಂದ್ರೋದಯ

**ಅಥವಾ**

ಮಹರ್ಷಿ

ಉತ್ತರ : ____________________

27. ಬೆಟ್ಟದಾವರೆ

**ಅಥವಾ**

ಕೆರೆಯಲ್ಲಿ

ಉತ್ತರ : ____________________

ಈ ಕೆಳಗಿನವುಗಳಲ್ಲಿ ಐದಕ್ಕೆ ಅರ್ಥ ತಿಳಿಸಿ. **5 × 1 = 5**

28. ವಾರಿಧಿ

**ಅಥವಾ**

ಇಳೆ

ಉತ್ತರ : ______________________________

29. ತುರಗ

**ಅಥವಾ**

ನಿಶೆ

ಉತ್ತರ : ______________________________

30. ಪಂಕ

**ಅಥವಾ**

ಭಾನು

ಉತ್ತರ : ______________________________

31. ಅನಲ

**ಅಥವಾ**

ಕುಸುಮ

ಉತ್ತರ : ______________________________

32. ಪುರ

**ಅಥವಾ**

ದನುಜ

ಉತ್ತರ : ______________________________

ಈ ಕೆಳಗಿನವುಗಳಲ್ಲಿ ಐದಕ್ಕೆ ವಿರುದ್ಧಾರ್ಥಕ ಪದ ಬರೆಯಿರಿ : **5 × 1 = 5**

33. ಮುಂಗಾರು

**ಅಥವಾ**

ಉತ್ಸಾಹ

ಉತ್ತರ : ______________________________

34. ಆದಿ

**ಅಥವಾ**

ಸ್ವದೇಶಿ

ಉತ್ತರ : ______________________________

35. ಪರಿಚಿತ

**ಅಥವಾ**

ಇರುಳು

ಉತ್ತರ : ______________________________

36. ಹ್ರಸ್ವ

**ಅಥವಾ**

ತಂಪು

ಉತ್ತರ : ______________________________

37. ಬಾಹ್ಯ

**ಅಥವಾ**

ಜಡ

ಉತ್ತರ : ______________________________

ಚಿತ್ತು ಬರಹಕ್ಕಾಗಿ ಸ್ಥಳ

**SPACE FOR ROUGH WORK**

ಚಿತ್ತು ಬರಹಕ್ಕಾಗಿ ಸ್ಥಳ

**SPACE FOR ROUGH WORK**